ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ

**ಫೌಜದಾರಿ ಪ್ರಕರಣ ಸಂಖ್ಯೆ: 724/2017**

**ಸರಕಾರದ ಪರವಾಗಿ ಃ ಅಬಕಾರಿ ಪೋಲೀಸ್ ಸೇಡಂ**

//ವಿರುದ್ಧ//

**ಆರೋಪಿ :** ಜಯಪ್ರಕಾಶ ತಂದೆ ರಾಮಚಂದ್ರ ದೇವರಕೊಂಡ
ವಃ 29ವರ್ಷ, ಉಃ ಕಿರಾಣಿ ಅಂಗಡಿ
ಸಾಃ ಖಂಡೇರಾಯನಪಲ್ಲಿ ಗ್ರಾಮ
ತಾಃ ಸೇಡಂ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313ರ ಅನ್ವಯ ಆರೋಪಿಯ ಹೇಳಿಕೆ**

ಪ್ರಶ್ನೆ 1) ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳನ್ನು ಮನಪೂರ್ವಕವಾಗಿ ಕೇಳಿದ್ದಿರಾ ?
ಉಃ ಕೇಳಿರುತ್ತೇನೆ.

ಪ್ರಶ್ನೆ 2) ಚಾಸಾ.7/ಪ್ರಾಸಾ.2 ಗೌರಿಶಂಕರ ತಂದೆ ಗುರಪ್ಪ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29.09.2025 ರಂದು, ಇವರು 25-07-2015 ರಿಂದ 05-02-2024 ರವರೆಗೆ ಸೇಡಂ ವಲಯದಲ್ಲಿ ಅಬಕಾರಿ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ದಿಃ11-06-2017 ರಂದು ಅವರ ಅಬಕಾರಿ ನೀರಿಕ್ಷಕರೊಂದಿಗೆ ಇವರು ಮತ್ತು ಚಾ ಸಾ 3 ಮತ್ತು 6 ರವರು ಕೂಡಿಕೊಂಡು ಮೊದಲು ವೆಂಕಟಾಪುರ, ಹಿಂದಿರಾನಗರ, ಬಸಲೋದಿ ತಾಂಡಾದಲ್ಲಿ ದಾಳಿ ಮಾಡಿಕೊಂಡು ನಂತರ ಕಂಡರಾಯನ ಪಲ್ಲಿಗೆ ಹೋಗಿ ರಾಮಚಂದ್ರ ದೇವರಕೊಂಡ ಅವರ ಅಂಗಡಿಗೆ ಹೋಗಿ ತಪಾಸಣೆ ಮಾಡಲಾಗಿ ಅಲ್ಲಿ ಬೆಲ್ಲ, ಸ್ಪಟಿಕ, ಹಾಗೂ ನವಸಾಗರ ಸಿಕ್ಕಿತ್ತು, 16 ಪೆಟ್ಟಿಗೆಯಲ್ಲಿ ತಲಾ ಒಂದು ಪೆಟ್ಟಿಗೆಯಲ್ಲಿ ತಲಾ 19 ಕೆ ಜಿ ಯಂತೆ ಒಟ್ಟು 300 ಕೆ ಜಿ ಬೆಲ್ಲ ಇತ್ತು, 4 ಪೆಟ್ಟಿಗೆಯಲ್ಲಿ ತಲಾ 25 ಕೆ ಜಿಯಂತೆ 100 ಕೆ ಜಿ ನವಸಾಗರ ಇತ್ತು, ಅದೇ ರೀತಿ 2 ಚೀಲಗಳಲ್ಲಿ ತಲಾ 50 ಕೆ ಜಿಯಂತೆ ಒಟ್ಟು 100 ಕೆ ಜಿ ಸ್ಪಟಿಕ ಇತ್ತು, ನಂತರ ಸದರಿ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಆತನು ತನ್ನ ಹೆಸರು ಜಯಪ್ರಕಾಶ ತಂದೆ ರಾಮಚಂದ್ರ ದೇವರಕೊಂಡ ಎಂದು ತಿಳಿಸಿರುತ್ತಾರೆ, ಎಲ್ಲಾ ಮು ಮಾನ್ನು ವಶಕ್ಕೆ ತೆಗೆದುಕೊಂಡು ಅದರಲ್ಲಿ ಎಲ್ಲಾ 16 ಪೆಟ್ಟಿಗೆಗಳಲ್ಲಿ ತಲಾ 50 ಗ್ರಾಂ ನಷ್ಟು ಒಟ್ಟು 800 ಗ್ರಾಂ ಬೆಲ್ಲವನ್ನು, 200 ಗ್ರಾಂ ನಂತೆ 4 ಪೆಟ್ಟಿಗೆಗಳಲ್ಲಿ ತಲಾ 200 ಗ್ರಾಂ ಹೀಗೆ ಒಟ್ಟು 800 ಗ್ರಾಂ ಮತ್ತು 2 ಚಿಲಗಳಲ್ಲಿ 100 ಗ್ರಾಂ ನಂತೆ ಒಟ್ಟು 200 ಗ್ರಾಂ ಸ್ಪಟಿಕವನ್ನು ರಾಸಾಯನಿಕ ಪರೀಕ್ಷೆ ಕುರಿತು ಪ್ರತ್ಯೇಕವಾಗಿ ವಶಕ್ಕೆ ಪಡೆದುಕೊಂಡು ಅದನ್ನು ಸೀಲು ಮಾಡಲಾಗಿದೆ, ನಂತರ ಆರೋಪಿತನಿಗೆ ದಸ್ತಗಿರಿ ಮಾಡಿ ಮು ಮಾ ನ್ನು ಅವರ ವಶಕ್ಕೆ ಪಡೆದುಕೊಂಡಿರುತ್ತಾರೆ, ಸ್ಥಳದಲ್ಲಿ 11.30 ಗಂಟೆಯಿಂದ 12.30 ಗಂಟೆಯ ವೆರಗೆ ಪಂಚನಾಮೆಯನ್ನು ಬರೆದು ಮುಗಿಸಲಾಯಿತು, ನಂತರ ಅವರ ಕಛೇರಿಗೆ ಬಂದು ಮುಂದಿನ ಪ್ರಕ್ರಿಯೇ ಮಾಡಿದರು, ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ, ಜಪ್ತಿ ಪಡಿಸಿಕೊಂಡಂತಹ ಮು ಮಾನ್ನು ನೋಡಿದರೆ ಗುರುತಿಸುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 3) ಚಾಸಾ.3/ಪ್ರಾಸಾ.4 ದೊಡ್ಡಪ್ಪ ತಂದೆ ಭೀಮಷಾ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 9.02.2026 ರಂದು, ಇವರು 05-09-2014 ರಿಂದ 27-03-2018 ವರೆಗೆ ಚಿತ್ತಾರಪುರ ಅಬಕಾರಿ ಕಛೇರಿಯಲ್ಲಿ ಅಬಕಾರಿ

ನೀರೀಕ್ಷಕರು ಎಂದು ಕರ್ತವ್ಯ ನಿರ್ವಹಿಸಿರುತ್ತಾರೆ, ದಿಃ 11-06-2017 ರಂದು ಚಿತ್ತಾಪುರ ಉಪ ವಿಭಾಗದ ಉಪಾಧೀಕ್ಷರ ನೇತೃತ್ವದಲ್ಲಿ ತೆಲಂಗಾಣ ಮತ್ತು ಕರ್ನಾಟಕ ರಾಜ್ಯದ ಗಡಿ ಭಾಗದಲ್ಲಿ ಅಕ್ರಮವಾಗಿ ಕಳ್ಳ ಬಟ್ಟಿ ಸರಾಯಿ ಮಾರಾಟ ಮಾರುತ್ತಿದ್ದಾರೆ ಎಂದು ಮಾಹಿತಿ ಬಂದ ಮೇರೆಗೆ 2 ರಾಜ್ಯದ ಅಭಕಾರಿ ಅಧಿಕಾರಿ ರವರ ಸಂಯುಕ್ತ ದಾಳಿ ಮಾಡಲು ಪ್ಲಾನ್ ಮಾಡಿದರು, ನಂತರ ಬೆಳ್ಳಿಗ್ಗೆ 07-00 ಸುಮಾರಿಗೆ ಸೇಡಂ ವಲಯದ ಅಭಕಾರಿ ಕಛೇರಿಗೆ ಬಂದು ಸಿಬ್ಬಂದಿಯ ಸಹಾಯದೊಂದಿಗೆ ಇಬ್ಬರು ಪಂಚರನ್ನು ಬರಮಾಡಿಕೊಂಡಿದ್ದಾರೆ, ಪಂಚರಿಗೆ ಮಾಹಿತಿಯನ್ನು ತಿಳಿಸಿ ಸೇಡಂ ನಿಂದ ಹೊರಟು ಗುಂದೆಂಪಲ್ಲಿತಾಂಡ, ವೆಂಕಟಾಪುರ, ಕಾರಬಾಗಿ ತಾಂಡಾ, ಇಂದಿರಾನಗರ ತಾಂಡ ಗಳಿಗೆ ಹೋಗಿ ಸಾಮೂಹಿಕ ದಾಳಿ ಮಾಡಿದರು, ಇವರು ಸದರಿ ದಾಳಿ ಮಾಡುವ ಕಾಲಕ್ಕೆ ಕಳ್ಳ ಬಟ್ಟಿ ಸರಾಯಿಯನ್ನು ತಯಾರಿಸಲು ಬೇಕಾಗುವ ಕಚ್ಚಾ ಮಾಲು ಕಂಡೆರಾಯನ ಪಲ್ಲಿಯಲ್ಲಿರುವ ರಾಮಚಂದ್ರರವರ ಅಂಗಡಿಯಲ್ಲಿ ಸಿಗುತ್ತದೆ ಎಂದು ಗೊತ್ತಾಯಿತು, ಆಗ ಕಂಡೆರಾಯ ಪಲ್ಲಿಗೆ 11-20 ಗಂಟೆಗೆ ತಲುಪಿದರು, ತಮ್ಮ ವಾಹನವನ್ನು ನೋಡಿ ಆರೋಪಿತರು ಅಂಗಡಿಯ ಶೆಟರನ್ನುಬಂದ್ ಮಾಡಲು ಪ್ರಯತ್ನಿಸಿದರು, ನಂತರ ಅವರ ಸಿಬ್ಬಂದಿಯವರು ಅವರನ್ನು ತಡೆದು ನಿಲ್ಲಿಸಿ ಅವರಿಗೆ ಕಳ್ಳ ಬಟ್ಟಿ ಸರಾಯಿಗೆ ಬೇಕಾಗುವ ಕಚ್ಚಾ ಮಾಲನ್ನು ಅಕ್ರಮವಾಗಿ ಇಟ್ಟಿದ್ದೀರಿ ಅಂತಾ ಬಾತಮಿ ಬಂದಿದೆ ಅದಕ್ಕೆ ಇವರು ಅಂಗಡಿಯನಲ್ಲು ಶೋದನೆ ಮಾಡಬೇಕಾಗಿದೆ ಅಂತಾ ಹೇಳಿ ಶೋದಾನಾ ಪತ್ರವನ್ನು ತಯಾರಿಸಿ ಶೋದನೆ ಮಾಡಲಾಗಿ ಅಲ್ಲಿ ಸದರಿ ಅಂಗಡಿಯಲ್ಲಿ 16 ಪೆಟ್ಟಿಗೆಗಳಲ್ಲಿ ಅಂದಾಜು 300 ಕೆ ಜಿ ಯಷ್ಟು ಕೊಳೆತ ಬೆಲ್ಲ ಸಿಕ್ಕಿತ್ತು, ಅದೇ ರೀತಿ 4 ಬ್ಯಾಗ್ ಗಳಲ್ಲಿ ಒಟ್ಟು 100 ಕೆ ಜಿ ಯಷ್ಟು ನವಸಾಗರ ದೋರೆಯಿತು, ಅದೇ ರೀತಿ 2 ಚೀಲಗಳಲ್ಲಿ ಒಟ್ಟು 100 ಕೆ ಜಿ ಸ್ಪಟಿಕ ದೊರೆಯಿತು, ನಂತರ ಆರುಪಿತನಿಗೆ ಈ ಬಗ್ಗೆ ವಿಚಾರಿಸಿದಾಗ ಅವನು ಇವುಗಳನ್ನು ಹೈದ್ರಾಬಾದ್ ನಿಂದ ತಂದು ಸುತ್ತಾ ಮುತ್ತಾ ತಾಂಡಾಗಳಿಗೆ ಮಾರಾಟ ಮಾರುತ್ತಿದ್ದಾನೆ ಎಂದು ತಿಳಿಸಿರುತ್ತಾನೆ, ನಂತರ ಆರೋಪಿತರ ಹೆಸರು ಮತ್ತು ವಿಳಾಸವನ್ನು ವಿಚಾರಿಸಲಾಗಿ ಆತನ ತನ್ನ ಹೆಸರು ಜಯಪ್ರಕಾಶ್ ತಂದೆ ರಾಮಚಂದ್ರ ದೇವರಕೊಂಡು ಎಂದು ತಿಳಿಸಿರುತ್ತಾರೆ, ನಂತರ ಎಲ್ಲಾ ಸಾಮಾಗ್ರಿಗಳನ್ನು ತಮ್ಮ ವಶಕ್ಕೆ ಪಡೆದಕೊಂಡು ಅದರಲ್ಲಿ 16 ಪ್ಯಾಕೇಟುಗಳಲ್ಲಿ ತಲಾ 50 ಗ್ರಾಂ ನಷ್ಟು ಕೊಳೆತ ಬೆಲ್ಲವನ್ನು ತೆಗೆದು ಮತ್ತು 4 ಬ್ಯಾಗ್ ಗಳಲ್ಲಿರುವ ನವಸಾಗರ ಪೈಕಿ ತಲಾ 200 ಗ್ರಾಂ ನಂತೆ ಒಟ್ಟು 4 ಪಾಕೇಟುಗಳು, ಅದೇ ರೀತಿ 100 ಗ್ರಾಂ ಚೀಲದಲ್ಲಿದ್ದ ಸ್ಪಟಿಕವನ್ನು ರಾಸಾಯನಿಕ ಪರೀಕ್ಷೆ ಕುರಿತು ತೆಗೆದುಕುಂಡು ಅದಕ್ಕೆ ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಲಾಯಿತು, ನಂತರ ಪ್ರಕರಣದ ವಿವರಗಳನ್ನು ಬರೆದು ಮಾದರಿ ಮುದ್ರೆಯನ್ನು ಹಾಕಲಾಯಿತು, ಸದರಿ ಪಂಚನಾಮೆಯನ್ನು ಬೆಳಿಗ್ಗೆ 11-30 ರಿಂದ 12-30 ಗಂಟೆಯ ವರೆಗೆ ಜರುಗಿಸಲಾಯಿತು, ಸಾಕ್ಷಿಯ ಸದರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ನಂತರ ಅಬಕಾರಿ ಕಛೇರಿ ಸೇಡಂ ಗೆ ಬಂದು ಆರೋಪಿತರ ವಿರುದ್ದ ಪ್ರಕರಣವನ್ನು ದಾಖಲಿಸಿಕೊಂಡು ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಧಿಕಾರಿಗೆ ಕಳುಹಿಸಿಕೊಟ್ಟಿರುತ್ತಾರೆ, ಸಾಕ್ಷಿಯು ಸದರಿ ಪ್ರ ವ ವರದಿಯನ್ನು , ಶೋಧನಾ ಪತ್ರವನ್ನು ನೋಡಿ ಗುರುತಿಸಿರುತ್ತಾರೆ, ನಂತರ ಅದೇ ದಿನ ಆರೋಪಿತನಿಗೆ ನ್ಯಾಯಾಂಗ ಬಂದನ ಕುರಿತು ಕಳುಹಿಸಿಕೊಟ್ಟಿರುತ್ತಾರೆ, . ನಂತರ ಸದರಿ ಕಡತವನ್ನು ಮುಂದಿನ ತನಿಕೆಗಾಗಿ ಚಾ ಸಾ 8 ರವರಿಗೆ ವಹಿಸಿಕೊಟ್ಟಿರುತ್ತಾರೆ, ಎಂದು ನುಡಿಯುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 4) ಚಾಸಾ.8/ಪ್ರಾಸಾ.5 ಮೊಹ್ಮಮದ ಇಮಾಮ ತಂದೆ ಬಾವ ಸಾಹೇಬ, ತಮ್ಮ ಸಾಕ್ಷ್ಯದಲ್ಲಿ ದಿನಾಂಕ 25.02.2026 ರಂದು, ಇವರು 01-08-2017 ರಿಂದ 30-11-2017 ರವರೆಗೆ ಸೇಡಂ ವಲಯದ ಅಬಕಾರಿ ಉಪನಿರೀಕ್ಷಕ ಎಂದು ಹೆಚ್ಚುವರಿ ಪ್ರಭಾರವನ್ನು ವಹಿಸಿ ಕರ್ತವ್ಯ ನಿರ್ವಹಿಸಿರುತ್ತಾರೆ, ದಿ. 30-08-

2017 ರಂದು ಸದರಿ ಪ್ರಕರಣದಲ್ಲಿ ರಾಸಾಯನಿಕ ವಿಶ್ಲೇಷಣಾವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತಾರೆ, ಸದರಿ ವರದಿಯನ್ನು ನೋಡಿ ಗುರುತಿಸಿರುತ್ತಾರೆ, ನಂತರ ದಿನಾಂಕ 11-9-2017 ರಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ, ಎಂದು ಹೇಳುತ್ತಾರೆ, ಅದಕ್ಕೆ ನೀನೇನು ಹೇಳುತ್ತೀ?
ಉಃ ಸುಳ್ಳು.

ಪ್ರಶ್ನೆ 5) ನೀನು ಇನ್ನೇನಾದರೂ ಹೆಚ್ಚಿಗೆ ಹೇಳುವುದು ಇದೆಯೇ ?
ಉಃ

ಪ್ರಶ್ನೆ 6) ನಿನ್ನ ಪರವಾಗಿ ಯಾವುದಾದರೂ ಸಾಕ್ಷಿಗಳನ್ನು ಮಾಡಿಸುತ್ತೀಯಾ?
ಉಃ

(ಆರೋಪಿಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಆರೋಪಿತನ ಹೇಳಿಕೆಯನ್ನು ದಾಖಲಿಸಿಕೊಂಡು ಆತನಿಗೆ ಗೊತ್ತಿದ್ದ ಭಾಷೆಯಲ್ಲಿ ಅಭಿಯೋಜಕರ ಪರ ವಿಚಾರಣೆಯಾದ ಸಾಕ್ಷಿಗಳ ಹೇಳಿಕೆಗಳನ್ನು ಓದಿ ಹೇಳಿ ಆತನ ಹೇಳಿಕೆಯನ್ನು ಪಡೆಯಲಾಯಿತು).

ಸಹಿ/-

ದಿನಾಂಕ ಃ 06-03-2026

ಪ್ರ.ದ. ನ್ಯಾ.ದಂ. ಸೇಡಂ.